


ಚಿತ್ರ : ಪಿ. ಪುರುಷೋತ್ತಮ ಕಾರಂತ್

ಒಮ್ಮೆ ಬುದ್ಧನು ಉದ್ಯಾನವನವೊಂದರಲ್ಲಿ ತಂಗಿದ್ದ. ಒಣಗಿದ ಎಲೆಗಳ ರಾಶಿಯೇ ಹಾಸಿಗೆ. ಒಂದು ದಿನ ಬುದ್ಧನ ಬಳಿಗೆ ಶಿಷ್ಯನೊಬ್ಬ ಬಂದು ಕೇಳಿದ, 'ದೇವ, ನಿನ್ನೆಯ ರಾತ್ರಿ ತಮಗೆ ಸುಖನಿದ್ರೆ ಬಂದಿತೆ?'' ''ಪ್ರಿಯ ಶಿಷ್ಯ ಸುಖವಾಗಿಯೇ ನಿದ್ರಿಸಿದೆ''ಎಂದು ಬುದ್ಧ ಉತ್ತರಿಸಿದ. ''ನಿನ್ನೆಯ ರಾತ್ರಿ ಹಿಮ ಬೀಳುತ್ತಿತ್ತು. ಚಳಿಯೂ ಬಹಳವಾಗಿತ್ತು. ನೀವು ಮಲಗುವುದೂ ಕೂಡ ಒಣ ಎಲೆಗಳ ಮೇಲೆ! ಅದ್ಹೇಗೆ ಸುಖವಾಗಿ ನಿದ್ರಿಸಿದೆ ಎಂದು ಹೇಳುವಿರೋ ಗೊತ್ತಾಗುತ್ತಿಲ್ಲ'', ಎಂದು ಶಿಷ್ಯ ಉದ್ಗಾರ ವೆತ್ತಿದ. 'ನೋಡು ಮಗು, ನನ್ನ ಪ್ರಶ್ನೆಗೆ ಉತ್ತರ ಕೊಡು. ಒಬ್ಬ ಧನಿಕನ ಮಗನ ಕೋಣೆಯಲ್ಲಿ ಸುಪ್ಪತ್ತಿಗೆಯಿದ್ದು, ಚಳಿಯಾಗದಂತೆ ಕಿಟಕಿ ಬಾಗಿಲುಗಳು ಮುಚ್ಚಿದ್ದು, ಹೊದೆಯಲು ಬೆಚ್ಚನೆಯ ಕಂಬಳಿಯಿದ್ದು, ಸೇವೆ ಮಾಡಲು ನಾಲ್ವರು ಹೆಂಗಸರು ಇದ್ದರೆ ಅವನು ಸುಖವಾಗಿ ನಿದ್ರಿಸ ಬಲ್ಲನೆ?'' ಬುದ್ಧ ಪ್ರಶ್ನಿಸಿದ. 'ಹೌದು ದೇವ, ಮತ್ತೇನು ತಾನೇ ಬಯಸಬಲ್ಲ ಮನುಷ್ಯ. ಇಷ್ಟೆಲ್ಲ ಇದ್ದಮೇಲೆ ಅವನು ಸುಖ ವಾಗಿ ಮಲಗಲೇಬೇಕು,'' ಶಿಷ್ಯ ಉತ್ತರಿಸಿದ. 'ಸರಿ, ಮಗು. ಆದರೆ ಆ ಧನಿಕನ ಪುತ್ರನಿಗೆ ರೋಗದಿಂದಾಗಿ ಶಾರೀರಿಕ ಅಥವಾ ಮಾನಸಿಕ ತೊಂದರೆಗಳಿದ್ದರೆ, ಆಗಲೂ ಅವನು ಸುಖ ವಾಗಿ ನಿದ್ರಿಸಬಲ್ಲನೇ?'' ಬುದ್ಧ ಮರು ಪ್ರಶ್ನಿಸಿದ. ''ಇಲ್ಲ ಗುರುಗಳೇ! ಅವನಿಗೆ ನಿದ್ರೆ ಬಾರದು,'' ಶಿಷ್ಯ ಒಪ್ಪಿದ. 'ಮತ್ತೆ ಆ ಧನಿಕನ ಮಗನಲ್ಲಿ ದ್ವೇಷ ಮೋಹಗಳಿಂದ ಉಂಟಾಗುವ ಶಾರೀರಿಕ ಹಾಗೂ ಮಾನಸಿಕ ಒತ್ತಡಗಳಿದ್ದರೆ ಅವನು ಸುಖವಾಗಿ ನಿದ್ರಿಸಬಲ್ಲನೇ?'' ಬುದ್ಧ ಮತ್ತೆ ಪ್ರಶ್ನಿಸಿದ. ''ಇಲ್ಲ. ಆಗಲೂ ಅವನಿಗೆ ಸರಿಯಾಗಿ ನಿದ್ರೆ ಬರಲಾರದು'' ಶಿಷ್ಯ ಒಪ್ಪಿಕೊಂಡ.



''ಮಗು! ತಥಾಗತನಲ್ಲಿ ರಾಗ, ದ್ವೇಷ, ಮೋಹಗಳಾಗಲಿ, ಅವುಗಳಿಂದ ಉತ್ಪನ್ನ ವಾಗುವ ಮಾನಸಿಕ, ಶಾರೀರಿಕ ತೊಂದರೆ ಗಳಾಗಲಿ ಇಲ್ಲವೇ ಇಲ್ಲ. ಆದ್ದರಿಂದಲೇ ಸುಖ ವಾಗಿ ನಿದ್ರೆ ಮಾಡಿದೆ. ವಾಸ್ತವವಾಗಿ ನಿದ್ರೆಗೆ ಸುಪ್ಪತ್ತಿಗೆ, ಕಂಬಳಿಗಳು ಬೇಕಿಲ್ಲ. ಮನಸ್ಸು ಶಾಂತವಾಗಿದ್ದರೆ, ಮುಳ್ಳುಗಳ ಮೇಲೆ ಮಲಗಿ ದರೂ ನಿದ್ರೆ ಬರಬಲ್ಲದು. ಶಾಂತವಾಗಿರುವ ಮನಸ್ಸೇ ಸುಖನಿದ್ರೆಗೆ ಮೂಲಕಾರಣ.'' ✪